


## ಧಾರಾವಾಹಿಯ ಜೀವ ತುಳಸಿ

ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು' ಶುರುವಾಗಿ ತುಂಬಾ ದಿನಗಳೇನೂ ಆಗಿಲ್ಲ. ಆಗಲೇ ಸಮರ್ಥ್ ಪಾತ್ರಧಾರಿ ಬದಲಾಗಿದ್ದಾರೆ. ಹೊಸ ಪಾತ್ರಧಾರಿ ಸಿರಿ ಪಾತ್ರಕ್ಕೆ ಸರಿ ಹೊಂದುವುದಿಲ್ಲ. ಶಾರ್ವರಿಯಂತಹ ಖಳನಾಯಕಿಯ ನಡುವೆಯೂ ತಕ್ಕಮಟ್ಟಿಗೆ ನೋಡಬಹುದು ಎಂದೆನಿಸುತ್ತಿದೆ. ಮುಖ್ಯ ಪಾತ್ರಧಾರಿ ತುಳಸಿಗೆ ಅಪಘಾತ ಮಾಡಿಸಿರುವುದು ಅನಗತ್ಯವಾಗಿತ್ತು. ವೈದ್ಯರು ಹೇಳಿದಂತೆ ತುಳಸಿಗೆ ಮೆಮೊರಿ ಲಾಸ್ ಆದರೂ ಕೋಮಾಗೆ ಹೋದರೂ ಧಾರಾವಾಹಿಗೆ ಬ್ರೇಕ್ ಹಾಕಿದ ಹಾಗೆ.

—ಅರುಣ್ ಕೆ.ಎನ್., ಬೆಂಗಳೂರು

## 'ಮಣ್ಣು ತಿಂದರೂ ಮರೆಯಲ್ಲಿ ತಿನ್ನಬೇಕು'

'ವೀಕೆಂಡ್ ವಿತ್ ರಮೇಶ್' ಕಾರ್ಯಕ್ರಮದಲ್ಲಿ ಜೈಜಗದೀಶ್ ಅವರನ್ನು ಸಾಧಕರ ಕುರ್ಚಿಯಲ್ಲಿ ಕೂರಿಸಿ, ಪರಿಚಯಿಸಿದ್ದು ಖುಷಿ ನೀಡಿತು. ದೀಪದ ಕೆಳಗೆ ಕತ್ತಲು ಇರುವಂತೆ ಎಲ್ಲಾ ವ್ಯಕ್ತಿಗಳಲ್ಲಿ ದೋಷಗಳು ಇರುತ್ತವೆ. ಕಹಿ ಘಟನೆಗಳು ನಡೆದಿರುತ್ತವೆ. ಜೈಜಗದೀಶ್ ಅವರ ಮೊದಲ ಪತ್ನಿ ಮತ್ತು ಮಗಳನ್ನು ಆ ಸಂದರ್ಭದಲ್ಲಿ ಪರಿಚಯ ಮಾಡಿಸಿದ್ದು ಸಮಂಜಸ ಎನಿಸಲಿಲ್ಲ. 'ಮಣ್ಣು ತಿಂದರೂ ಮರೆಯಲ್ಲಿ ತಿನ್ನಬೇಕು' ಎಂಬ ಹಿರಿಯರ ಮಾತಿನಂತೆ ಅದು ಮರೆಯಲ್ಲಿ ಇದ್ದರೆ ಚೆನ್ನಾಗಿತ್ತು. ಇಂತಹ ಘಟನೆಗಳು ಮರುಕಳಿಸದಿರಲಿ.

—ಮಲ್ಲಿಕಾರ್ಜುನ ಸುರಧೇನುಪುರ

ವಾರದ ಪತ್ರ

## ವಿಷಯಾಧಾರಿತ ಘಟನೆಗಳಿಗೆ ಪ್ರಾಶಸ್ತ್ಯ ನೀಡಿ

ಧಾರಾವಾಹಿಯಲ್ಲಿ ನಾಯಕ ನಾಯಕಿ ಆರಂಭದಲ್ಲಿ ಬದ್ಧ ವೈರಿಗಳು. ನಂತರ ಇಬ್ಬರ ನಡುವೆ ಪ್ರೇಮಾಂಕುರವಾಗುತ್ತದೆ. ಅಷ್ಟರಲ್ಲಿ ಮತ್ತೊಂದು ಪ್ರೇಮದ ಸೆಲೆ ಆವರಿಸಿ ತ್ರಿಕೋನ ಸೆಳೆವಿನಲ್ಲಿ ಕಥೆ ಸಾಗುತ್ತದೆ. ಅದ್ದೂರಿ ಮದುವೆ, ಸಂಪ್ರದಾಯ, ಶಾಸ್ತ್ರಗಳ ನಡುವೆ ಗಟ್ಟಿಮೇಳದ ಹೊತ್ತಿಗೆ ತಾಳಿ ಕಟ್ಟಲು ವಿಘ್ನ. ನಿಶ್ಚಯವಾದ ಜೋಡಿಯಲ್ಲಿ ಒಬ್ಬರು ಬದಲಾಗಿ ಮಂಗಳ ಕಾರ್ಯ ಮುಂದುವರಿಯುವುದು. ಇಲ್ಲವೇ ಮುಹೂರ್ತದ ಶುಭಗಳಿಗೆಗೆ ಸರಿಯಾಗಿ ಮಂಗಳಸೂತ್ರ (ತಾಳಿ) ಮಾಯವಾಗಿ ಅರಿಶಿಣದ ಕೊಂಬು ಕಟ್ಟುವುದು.

ಇನ್ನೇನಾದರೂ ಗರ್ಭಧರಿಸಿದರೆ ಒಂದೆರಡು ವರ್ಷದ ತನಕ ಹೊಟ್ಟೆ ಹೊತ್ತು ತಿರುಗುವ ಕಥಾನಾಯಕಿ. ಖಳನಾಯಕಿ ಗರ್ಭಪಾತ ಮಾಡಿಸಲು ಹೂಡುವ ತಂತ್ರ. ಹೊಸ ಹೊಸ ಯೋಜನೆಗಳನ್ನು ಹೊಸೆಯುವುದು ಹೀಗೆ... ಸರಣಿ ಸಮಸ್ಯೆಯ ಕಥೆಯನ್ನು ಹೆಣೆಯುವ ನಿರ್ದೇಶಕರು ಕನ್ನಡ ಸಾಹಿತ್ಯವನ್ನು ಓದಿದರೆ ಹೊಸ ಯೋಚನೆಗಳು ಹೊಳೆಯುತ್ತವೆ. 'ಸುಧಾ' ವಾರ ಪತ್ರಿಕೆ ಓದಿದರೂ ಧಾರಾವಾಹಿಗೆ ವಿಭಿನ್ನ ಕಥೆಗಳು ಸಿಗುತ್ತವೆ. ಸಾರವಿಲ್ಲದ ಕಥೆಯನ್ನು ವರ್ಷಗಟ್ಟಲೆ ಎಳೆಯುವುದನ್ನು ಬಿಟ್ಟು ವಿಷಯಾಧಾರಿತ ಘಟನೆಗಳಿಗೆ ಪ್ರಾಶಸ್ತ್ಯ ನೀಡಿ ವೀಕ್ಷಕರಲ್ಲಿಯೂ ಸದಭಿರುಚಿಯನ್ನು ಹೆಚ್ಚಿಸಿ.

—ನಾ.ರಾ. ಜ್ಯೋತಿ, ಬೆಂಗಳೂರು

## ವೀಕ್ಷಕರ ಅಭಿಪ್ರಾಯವೆಂದರೆ ಅಸಡ್ಡೆಯೆ?

ಧಾರಾವಾಹಿಗಳ ನಿರ್ಮಾಪಕ ಮತ್ತು ನಿರ್ದೇಶಕರಿಗೆ ಈ ಮನವಿ. 'ಜಾಣರ ಪೆಟ್ಟಿಗೆ' ವಿಭಾಗದ ಪತ್ರಗಳನ್ನು ನೀವೂ ಒಮ್ಮೆಯಾದರೂ ಗಮನಿಸಿರುತ್ತೀರಿ ಎಂಬ ನಂಬಿಕೆ ನನ್ನದು. ನೀವು ಅದನ್ನು ಓದಿಯೂ ವರ್ಷಾನುಗಟ್ಟಲೇ ಕಥೆಯನ್ನು ಎಳೆದರೆ ಏನು ಪ್ರಯೋಜನ? ಅಸಂಬದ್ಧ ಸಂಚಿಕೆಗಳನ್ನು ರೂಪಿಸುವುದಕ್ಕೆ ತಮ್ಮ ಬುದ್ಧಿಯನ್ನು ಖರ್ಚು ಮಾಡುತ್ತಿದ್ದೀರಿ ಎನ್ನುವುದು ಇದರಿಂದ ಭಾಸವಾಗುತ್ತದೆ. ಅದರಲ್ಲೂ ವೀಕ್ಷಕ ವರ್ಗ ಎಂದೂ ಕಾಣದ, ಕೇಳರಿಯದ ಪಾಪ ಕೃತ್ಯಗಳನ್ನು ತಮ್ಮ ತಂಡ ಕಥೆಯಲ್ಲಿ ನಿರೂಪಿಸುತ್ತಿರುತ್ತದೆ. ಪ್ರತಿ ಕಥೆಗೂ ಭಯಂಕರ ಮನೆಮುರುಕ ಖಳನಾಯಕಿಯರು ಇರುವುದು ಸಂಪ್ರದಾಯವಾಗಿದೆ. ನೆಗೆಟಿವ್ ಪಾತ್ರ ಪೋಷಣೆಯ ಬಗ್ಗೆ ಎಲ್ಲಿಲ್ಲದ ಕಾಳಜಿ. ವೀಕ್ಷಕರ ಅಭಿಪ್ರಾಯವೆಂದರೆ ಅಸಡ್ಡೆಯೆ?

—ಆರ್. ವೀರೇಶ್ ಕುಮಾರ್, ಬೆಂಗಳೂರು



## 'ಭಾಗ್ಯಲಕ್ಷ್ಮಿ'ಗೆ ಪದ್ಮಜಾ ಮೆರುಗು

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ' ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ನಟಿ ಪದ್ಮಜಾ ಅವರು ಕಥೆಯನ್ನು ಪೂರ್ತಿ ಆವರಿಸಿದ್ದಾರೆ ಎನ್ನುವಂತೆ ಕಾಣಿಸುತ್ತಿದೆ. ಅದಕ್ಕೆ ತಕ್ಕಂತೆ ಅವರ ಅಭಿನಯ ಕೂಡ ಇದೆ. ಪುಸ್ತಕದ ಅಂಗಡಿಗೆ ಬರಿಗಾಲಲ್ಲಿ ಹೋಗಿದ್ದು ಏಕೆ ಎಂದು ಗೊತ್ತಾಗಲಿಲ್ಲ.

—ಸೀತಾ ಕೇಶವ, ಸಿದ್ದಿ

## ನ್ಯಾಯದ ತಕ್ಕಡಿ ಸರಿ ಇಲ್ಲ

ಇತ್ತೀಚೆಗೆ ಚಂದನ ವಾಹಿನಿಯಲ್ಲಿ ಪ್ರಸಾರವಾದ 'ಕಾನೂನು ಮಾಹಿತಿ' ಕಾರ್ಯಕ್ರಮ ಚೆನ್ನಾಗಿತ್ತು, ಉಪಯುಕ್ತ ಅನ್ನಿಸಿತು. ಕೊಲೆ, ಅತ್ಯಾಚಾರದಂತಹ ಗುರುತರ ಅಪರಾಧ ಆದಾಗ ಸಂತ್ರಸ್ತರಿಗೆ ಸಿಗುವ ಪರಿಹಾರ, ಅದನ್ನು ಪಡೆಯುವ ಬಗೆಗೆ ಜಿಲ್ಲಾ ನ್ಯಾಯಾಧೀಶ ಶಶಿಧರ ಶೆಟ್ಟಿ ಅವರು ವಿವರವಾಗಿ ಹೇಳಿದರು. ಆದರೆ, ಈ ಕಾರ್ಯಕ್ರಮದ ಮಧ್ಯ ತೋರಿಸಿದ ಚಿತ್ರದಲ್ಲಿ ಕಾನೂನಿನ ತಕ್ಕಡಿಯ ಎರಡು ತಟ್ಟೆಗಳು ಸಮಾನಾಂತರ ಇರಲಿಲ್ಲ. ಈ ನ್ಯೂನತೆಯನ್ನು ಸರಿಪಡಿಸಬೇಕಿತ್ತು.

—ನಾರಾಯಣ ಯಾಜಿ ಶಿರಾಲಿ

## ಮಾತು ನಗೆಪಾಟಲಾದರೆ ಹೇಗೆ?

ಕನ್ನಡ ವಾಹಿನಿಗಳಲ್ಲಿ ತೆಲುಗು, ತಮಿಳು ಸೇರಿದಂತೆ ಜನಪ್ರಿಯಗೊಂಡ ಮರಾಠಿ, ಹಿಂದಿಯ ಧಾರಾವಾಹಿ–ಸಿನಿಮಾಗಳೂ ಬರುತ್ತವೆ. ತಾಂತ್ರಿಕವಾಗಿ ಮೂಲ ದೃಶ್ಯಕ್ಕೆ ಕನ್ನಡ ಭಾಷೆಯನ್ನು ಡಬ್ ಮಾಡಿರುತ್ತಾರೇನೋ ಹೌದು. ಆದರೆ, ನಟರ ದೇಹಭಾಷೆಗೂ ಸಂಭಾಷಣೆಗೂ ಸಂಬಂಧವೇ ಇರಲ್ಲ. ಬದಲಿಗೆ, ಈ ಚಿತ್ರಗಳಿಗೆ ಕನ್ನಡದಲ್ಲಿ ಸಬ್ ಟೈಟಲ್ ಹಾಕಿದರೆ ಉತ್ತಮ ಎಂದೆನಿಸುತ್ತದೆ. ಪರಭಾಷೆಯ ತುಟಿಯ ಸಂಚಲನೆಗೆ ಕನ್ನಡ ತೇಪೆ ಹಾಕುವುದು ನಗೆಪಾಟಲಿನಂತಿರುತ್ತದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು